**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 76/2020**

**ಚಾ.ಸಾಃ 14, ಫ್ರಾ.ಸಾಃ 7**

| | |
|---|---|
| ಸಾಕ್ಷಿದಾರನ ಹೆಸರು | ಅನಿಲ್ ಶೇಟ್ |
| ತಂದೆಯ ಹೆಸರು | ಅಣ್ಣಪ್ಪ ಶೇಟ್ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ಅಕ್ಕಸಾಲಿಗ |
| ವಾಸ್ತವ್ಯ | ಬಗ್ಗೋಣ, ಕುಮಟಾ |

**ಸಾಕ್ಷಿಯನ್ನು ದಿನಾಂಕಃ 20-07-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯವಿರುತ್ತದೆ. ಆರೋಪಿಗಳು ಚಿನ್ನವನ್ನು ಖರೀದಿಸಲು ನನ್ನ ಬಳಿ ಬರುತ್ತಿದ್ದರಿಂದ ನನಗೆ ಅವರ ಪರಿಚಯ ಇರುತ್ತದೆ.

2019 ನೇ ಸಾಲಿನ ಒಂದು ದಿನ ಆರೋಪಿಗಳು ಕರಿಮಣಿ, ನೆಕ್ಲೇಸು, ಬಳೆ, ಉಂಗುರ, ಚೈನು, ಲಾಕೇಟು ಹಾಗೂ ಸಣ್ಣಪುಟ್ಟ ಆಭರಣಗಳು ಅಂದರೆ ಸುಮಾರು 83 ಗ್ರಾಂ 830 ಮಿಲಿಯಷ್ಟು ಆಭರಣಗಳನ್ನು ತಂಗಿ ಮದುವೆಗಾಗಿ ಹಣ ಬೇಕು ಎಂದು ಅಡವಿಟ್ಟಿದ್ದರು. ಅವುಗಳನ್ನು ನಾನು ಅವರಿಗೆ ಹಣ ನೀಡಿದ್ದು ಎಷ್ಟು ಎನ್ನುವುದು ನೆನಪಿಲ್ಲ. ನಂತರ ಸದರಿ ಆರೋಪಿಗಳು ಬಂದು ಬಂಗಾರವನ್ನು ಬಿಡಿಸಿಕೊಂಡಿಲ್ಲ.

ದಿನಾಂಕ 05-08-2020 ರಂದು ಸಿಪಿಐ ಫೋನ್ ಮಾಡಿ ಠಾಣೆಗೆ ಬರಲು ಹೇಳಿದ್ದರಿಂದ ನಾನು ಠಾಣೆಗೆ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ ಆರೋಪಿಗಳು ಮತ್ತು ಪೋಲಿಸರು ಇದ್ದರು. ಪೋಲಿಸರು ಆರೋಪಿಗಳು ಇಟ್ಟಿದ್ದ ಬಂಗಾರವು ಕಳ್ಳತನದ ವಸ್ತು ಎಂದು ಹೇಳಿ ಅವುಗಳನ್ನು ತರಲು ಹೇಳಿದ್ದರಿಂದ ನಾನು ಅವುಗಳನ್ನು ತಂದು ಠಾಣೆಯಲ್ಲಿ ಹಾಜರು ಮಾಡಿರುತ್ತೇನೆ. ಪೋಲಿಸರು ಆಭರಣಗಳನ್ನು ತೆಗೆದುಕೊಂಡು ಛಾಯಾಚಿತ್ರ ತೆಗೆಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಆಭರಣಗಳು, ಛಾಯಾಚಿತ್ರ ಮತ್ತು ಸಹಿ ಮಾಡಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಪಂಚನಾಮೆ ಮತ್ತು ಛಾಯಾಚಿತ್ರವನ್ನು ಗುರುತಿಸಿದ್ದು ಅವುಗಳನ್ನು ನಿಪಿ-10 ಮತ್ತು 11 ಹಾಗೂ ನಿಪಿ-10 ರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅರವರು ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**